**<u>ಸಾಕ್ಷಿಯನ್ನು ದಿನಾಂಕಃ 13-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ</u>**

1. ನಾನು ಬಿ.ಎ ಓದಿದ್ದೇನೆ. ನಾನು ಈ ಹಿಂದೆ ಗ್ರಾಮ ಪಂಚಾಯತಿ ಅಧ್ಯಕ್ಷನಾಗಿದ್ದು ನನ್ನ ಪತ್ನಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಾಗಿದ್ದರು. ನಾನು ಕಾಂಗ್ರೆಸ್ ಪಕ್ಷವನ್ನು ಪ್ರತಿನಿದಿಸುತ್ತಿದ್ದೇನೆ. 1 ನೇ ವಾದಿಯ ಗಂಡನಾದ ವಿರುಪಾಕ್ಷಪ್ಪ ಇವರು ಕೂಡ ಕಾಂಗ್ರೆಸ್ ಪಕ್ಷವನ್ನು ಪ್ರತಿನಿದಿಸುತ್ತಿದ್ದರು. ನನ್ನ ಮನೆ 1 ನೇ ಪ್ರತಿವಾದಿಯ ಮನೆಯಿಂದ ಸುಮಾರು 150 ಮೀಟರ್ ದೂರದಲ್ಲಿ ಇರುವುದು. ನಾನು ಯಡಿಹಳ್ಳಿ ಗ್ರಾಮದ ಖಾಯಂ ನಿವಾಸಿಯಾಗಿರುವೆನು. ಮರಿಯಮ್ಮಳು ಸಹ ಯಡಹಳ್ಳಿಯಲ್ಲಿ ವಾಸ ಮಾಡುವರು. 2 ನೇ ಪ್ರತಿವಾದಿ ರೇಣುಕಮ್ಮಳು ಸಹ ಯಡಿಹಳ್ಳಿಯಲ್ಲಿ ವಾಸ ಇರುವರು. ಮೃತ 1 ನೇ ಪ್ರತಿವಾದಿ ಮರಿಯಮ್ಮ ಮೃತ ಪಟ್ಟ ವಿಚಾರ ನನಗೆ ಆಕೆ ಮೃತ ಪಟ್ಟ ದಿನವೇ ಗೊತ್ತಾಗಿರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಮರಿಯಮ್ಮ ಮೃತ ಪಟ್ಟ ವಿಚಾರ ನನಗೆ ಇತ್ತಿಚೆಗೆ ಗೊತ್ತಾಯಿತು ಎಂದು ಬರೆಸಿರುವುದು ಸರಿ ಇರುವುದಿಲ್ಲ.

2. ಉಪನೊಂದಣಿ ಕಚೇರಿಗೆ ನಾನು 1 ನೇ ಪ್ರತಿವಾದಿಯೊಂದಿಗೆ ಬಂದಿರುವುದಿಲ್ಲ. ಆ ದಿನ ನಾನು 2 ಸಹಿಗಳನ್ನು ಮಾಡಿರಬಹುದು. ಸಹಿ ಮಾಡುವ ಮೊದಲು ದಾಖಲೆಯನ್ನು ಓದಿದ್ದೇನೆ. 2 ನೇ ಪ್ರತಿವಾದಿ ರೇಣುಕಮ್ಮ ಖರೀದಿ ಮಾಡಿಕೊಂಡ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ. ನನಗೆ ನೊಂದಣಿಯಾದ ವಿಚಾರ ಬಿಟ್ಟರೆ ಬೇರೆ ವಿಚಾರಗಳು ಗೊತ್ತಿರುವುದಿಲ್ಲ. ಆಲ್ಲಿ ಬೇರೆ ಯಾವುದೇ ವಿಚಾರಗಳು

ನಡೆದಿರುವುದಿಲ್ಲ. ಮರಿಯಮ್ಮನ ಹೆಸರಿಗೆ ಅಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿರುವುದಿಲ್ಲ.

3. ನನಗೆ ಇನ್ನೊಬ್ಬ ಸಾಕ್ಷಿದಾರರಾದ ರಾಮಾನಾಯ್ಕು ಇವರ ಪರಿಚಯ ಇರುತ್ತದೆ. ಅವರು ಈಗ ಬದುಕಿರುವರು. ಅವರು ನಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಕಾರಣ ನನಗೆ ಪರಿಚಯ ಇರುವರು. ರಾಮಾನಾಯ್ಕು ಇವರನುನ ಮರಿಯಮ್ಮ ಕರೆಸಿದ್ದರು. ಅವರೂ ಕೂಡ 1-2 ಸಹಿಗಳನ್ನು ದಾಖಲೆಯ ಮೇಲೆ ಹಾಕಿರಬಹುದು. ವಿರುಪಾಕ್ಷಪ್ಪರಿಗೂ ನನಗೂ ರಾಜಕೀಯ ವಿರೋದ ಇತ್ತು ಅಂದರೆ ಸರಿಯಲ್ಲ.

4. ನನಗೆ ದಿನದಿತ್ಯದಲ್ಲಿ ರೇಣುಕಮ್ಮ ಪರಿಚಯ ಇರುವರು. ಪತ್ರ ವ್ಯವಹಾರ ನಡೆದಾಗ 1 ನೇ ಪ್ರತಿವಾದಿ ಮರಿಯಮ್ಮ 2 ನೇ ಪ್ರತಿವಾದಿಯ ಮನೆಯಲ್ಲಿ ವಾಸ ಇದ್ದರು. ಸುಮಾರು 20-22 ವರ್ಷಗಳ ಕಾಲ ಮರಿಯಮ್ಮ ಅಲ್ಲಿಯೇ ಇದ್ದರು. 2 ನೇ ಪ್ರತಿವಾದಿ ರೇಣುಕಮ್ಮನ ಮನೆಯ ಹತ್ತಿರವೇ 1 ನೇ ಪ್ರತಿವಾದಿ ಮರಿಯಮ್ಮ ಹಾಗೂ ಆಕೆಯ ಗಂಡ ವಾಸವಿದ್ದರು. ಮಲ್ಲಪ್ಪ ವಿರುಪಾಕ್ಷಪ್ಪನ ಮನೆಯಲ್ಲಿ ವಾಸ ಇದ್ದರು ಅಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

13-02-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 13.02.2026